ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ತಿಳಿದಿದೆ.

ಆ) ಮೇಲ್ಕಂಡ ಪ್ರಸ್ತಾವನೆಯು ಕೋಲಾರ ಜಿಲ್ಲಾ ಪರಿಷತ್‌ನ ಸಹಮತಿಗಾಗಿ ೧೯೮೯ರ ಸೆಪ್ಟೆಂಬರ್‌ನಿಂದ ಬಾಕಿ ಉಳಿದಿದೆ.

ಇ) ಕೋಲಾರ ಜಿಲ್ಲಾ ಪರಿಷತ್‌ನ ಸಹಮತಿ ಬಂದ ನಂತರ, ರಸ್ತೆಯ ಪ್ರಾಮುಖ್ಯತೆ ಹಾಗೂ ಮೇಲ್ದರ್ಜೆಗೆ ಏರಿಸುವ ರಸ್ತೆಯ ಅಭಿವೃದ್ಧಿಗೆಬೇಕಾಗುವ ಹಣದ ಲಭ್ಯತೆ ಮುಂತಾದ ವಿಷಯಗಳನ್ನು ಪರಿಶೀಲಿಸಿ, ಮೇಲ್ಕಂಡ ರಸ್ತೆಗಳನ್ನು ಮೇಲ್ದರ್ಜೆಗೆ ಏರಿಸುವ ವಿಷಯವನ್ನು ತೀರ್ಮಾನಿಸಲಾಗುವುದು.

ಶ್ರೀ ಚೌಡಾರೆಡ್ಡಿ.—'ಅ'ನಲ್ಲಿ.

"Whether the Government is aware that the then Public Works Minister has proposed upgrading of certain routes in Chintamani Taluk, Kolar District"

ಎಂದು ಕೇಳಿದ್ದಕ್ಕೆ Yes ಎಂದು ಹೇಳಿದ್ದೀರಿ. ಯಾವ್ಯಾವ ರಸ್ತೆಗಳನ್ನು ಪ್ರಪೋಸ್ ಮಾಡಿದರು ಮತ್ತು ಆರ್ಡರ್ ಆಗಿದೆಯೆ ಹೇಳಿ ಸ್ವಾಮಿ ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ಅಧ್ಯಕ್ಷರೆ, ೪ ರಸ್ತೆಗಳ ಪ್ರಸ್ತಾವನೆ ಈಗಾಗಲೇ ಸರ್ಕಾರದ ಮುಂದಿದೆ. ಮೊದಲನೆಯದು, ಚಿಂತಾಮಣಿ ತಾಲ್ಲೂಕಿನ ಮುರುಗಮಲ್ಲ ಮಾರ್ಗವಾಗಿ ಆಂಧ್ರ ಪ್ರದೇಶದ ಗಡಿವರೆಗೆ ೪೫ ಕಿ.ಮೀ ಉದ್ದದ ಹಳ್ಳಿರಸ್ತೆ. ಎರಡನೇಯದು, ಚಿಂತಾಮಣಿ ತಾಲ್ಲೂಕಿನ ಚಿಂತಾಮಣಿ–ಬೇಗೂರು ರಸ್ತೆ ಕುಂತಾಪಲ್ಲಿ ಕ್ರಾಸ್‌ನ ೭.೫ ಕಿ.ಮೀ ನಿಂದ ಆಂಧ್ರ ಪ್ರದೇಶದ ಗಡಿವರೆಗೆ ೩೩ ಕಿ.ಮೀ ಉದ್ದದ ಹಳ್ಳಿರಸ್ತೆ, ಮೂರನೇದು ಎಡಗದಾಲೆ–ಕೈವಾರ ರಸ್ತೆಯಿಂದ ಚಿಂತಾಮಣಿ ಬಾಗೇಪಲ್ಲಿ ರಸ್ತೆ, ೧೬ ಕಿಮೀನಿಂದ ೨೮ ಕಿ.ಮೀ. ಉದ್ದದ ಹಳ್ಳಿ ರಸ್ತೆ. ನಾಲ್ಕನೇದು ಚಾಗವಾಲದಿಂದ ಆಂಧ್ರದ ಗಡಿವರೆಗೆ ೪ ಕಿ.ಮೀ. ಉದ್ದದ ಟಿಡಿಬಿ ರಸ್ತೆ, ಹಳ್ಳಿ ರಸ್ತೆ.

ಶ್ರೀ ಚೌಡಾರೆಡ್ಡಿ.—ಈಗಾಗಲೇ ಜಿಲ್ಲಾಪರಿಷತ್‌ನವರು ಅನುಮತಿ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಅದು ನಿಜವೇ ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ಅನುಮತಿ ಬಂದಿದೆ. ನಮ್ಮ ಇಲಾಖೆಯ ವತಿಯಿಂದ ಪರಿತೀಲನೆಕೂಡ ಆಗಿದೆ. ಶೀಘ್ರದಲ್ಲೇ ಇದಕ್ಕೆ ಸರ್ಕಾರಿ ಹುಕುಂ ಮಾಡುವ ಮೂಲಕ ಪಿಡಬ್ಲ್ಯೂಡಿ ರಸ್ತೆಯಾನ್ನಾಗಿ ಮಾಡಲಾಗುತ್ತದೆ.

ತಾರಕ ನಾಲಾ ಉಪ ವಿಭಾಗ ಹೆಗ್ಗಡದೇವನ ಕೋಟೆ ಇದನ್ನು ತೆಗೆದು ಹಾಕುವ ಬಗ್ಗೆ

೧೯೪. ಶ್ರೀ ಎಂ.ಪಿ. ವೆಂಕಟೇಶ್ (ಹೆಗ್ಗಡದೇವನ ಕೋಟೆ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತಾರಕ ನಾಲಾ ಉಪ ವಿಭಾಗ, ಹೆಗ್ಗಡದೇವನ ಕೋಟೆ ಇದನ್ನು ತೆಗೆದು ಹಾಕುವ ಉದ್ದೇಶ ವಿದೆಯೇ ?

ಆ) ಈ ಉಪ ವಿಭಾಗಕ್ಕೆ ಯಾವಾನ ಕೆಲಸಗಳು ಸೇರಿವೆ ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಪ್ರಸ್ತಾವೆ ಇರುವುದಿಲ್ಲ.

ಆ) ತಾರಕ ಯೋಜನೆಯ ನಾಲಾ ನಿರ್ಮಾಣ ಕೆಲಸಗಳು ಹಾಗೂ ನಿರ್ವಹಣಾ ಕೆಲಸಗಳು ಸೇರಿವೆ.

ಶ್ರೀ ಎಂ ಪಿ. ವೆಂಕಟೇಶ್.—ಮಾನ್ಯ ಅಧ್ಯಕ್ಷರೆ, ನನ್ನ ಎರಡನೇ ಪ್ರಶ್ನೆಗೆ ಉತ್ತರವಾಗಿ, 'ತಾರಕ ಯೋಜನೆಯ ನಾಲಾ ನಿರ್ಮಾಣ ಕೆಲಸಗಳು ಹಾಗೂ ನಿರ್ವಹಣಾ ಕೆಲಸಗಳು ಸೇರಿವೆ' ಎಂದು ಹೇಳಿದ್ದಾರೆ. ಕಳೆದ ಸಾರಿಸಲ್ಲಿ ತಾರಕ ಸಬ್ ಡಿವಿಜನ್‌ನಲ್ಲಿ ಯಾವ ಕೆಲಸಗಳೂ ಆಗಿಲ್ಲ, ದೆಚ್ಚಿನ ಹಣ

ಕೊಟ್ಟಿಲ್ಲ. ಲಕ್ಷಾಂತರ ರೂಪಾಯಿಗಳ ಕೆಲಸವಾಗಬೇಕಾಗಿದೆ. ಆದಕ್ಕೆ ಬಜೆಟ್‌ನಲ್ಲಿ ಪ್ರಾವಿಷನ್ ಮಾಡಿರಲಿಲ್ಲ. ಆದ್ದರಿಂದ ಈ ವರ್ಷವಾದರೂ ಬಜೆಟ್‌ನಲ್ಲಿ ಹಣ ಇಟ್ಟುಕೊಳ್ಳಬೇಕು ಮತ್ತು ಬಾಕಿ ಉಳಿದಿರುವ ಲಕ್ಷಾಂತರ ರೂಪಾಯಿಗಳ ಕೆಲಸಗಳನ್ನು ಮಾಡಬೇಕು.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಅಧ್ಯಕ್ಷರೇ, ಪ್ರಶ್ನೆ ಇರುವುದು ತಾರಕ ನಾಲಾ ಉಪವಿಭಾಗವನ್ನು ತೆಗೆದು ಹಾಕುವ ಉದ್ದೇಶವಿದೆಯೇ ಎಂದು ಕೇಳಿದ್ದಕ್ಕೆ ಪ್ರಸ್ತಾವೆ ಇರುವುದಿಲ್ಲ ಎಂದಿದ್ದೇನೆ. ಆದರೆ ಈಗ ಬಜೆಟ್‌ನಲ್ಲಿ ಹಣ ಕೊಟ್ಟಿಲ್ಲ ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು.—ಈ ಪ್ರಶ್ನೆಗೆ ದೊರಕಿಸಿರುವ ಉತ್ತರದ ಆಧಾರದ ಮೇಲೆ ಯಾವ ಉಪ ಪ್ರಶ್ನೆಯೂ ಉದ್ಭವಿಸುವುದಿಲ್ಲ.

ಕೆ.ಎಸ್.ಆರ್.ಟಿ.ಸಿ. ಷೆನರ್ವಿಮರ್ಶಕ ಬಸ್ ದರಗಳು

೩೧೯. ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) ಶ್ರೀ ಎನ್. ಷಫಿ ಅಹಮದ್ (ತುಮಕೂರು).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪುನರ್ ವಿವರ್ಶಿತ ಬಸ್ ದರ ತುಂಬಾ ದುಬಾರಿ ಎಂದು ಅದರ ಬಗ್ಗೆ ಜನ ಸಾಮಾನ್ಯರು ಪ್ರತಿಭಟಿಸಿ ಹಾಗೂ ದೂರುಗಳು ಬಂದಿರುವುದು ನಿಜವಲ್ಲವೇ ?

ಆ) ದರ ಏರಿಕೆ ವೈಜ್ಞಾನಿಕವಾಗಿ ನಡೆದಿಲ್ಲವೆಂಬ ಆಕ್ಷೇಪಣೆ ನಿಜವಲ್ಲವೇ ?

ಇ) ಹಾಗಿದ್ದಲ್ಲಿ ಇವುಗಳ ಬಗ್ಗೆ ಸರಕಾರದವರು ತೆಗೆದುಕೊಂಡ ಕ್ರಮಗಳೇನು ?

ಈ) ಸಾರಿಗೆ ಸಂಸ್ಥೆಯ ಆಡಳಿತ ವೆಚ್ಚ ದುಂದುಗಾರಿಕೆಯಿಂದ ಕೂಡಿದ್ದಾಗಿದೆ ಎಂಬ ಆರೋಪ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಉ) ಹಾಗಿದ್ದಲ್ಲಿ, ಇದರ ಬಗ್ಗೆ ಕೈಗೊಳ್ಳಲಿರುವ ಕ್ರಮಗಳೇನು ?

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ರಾಜ್ಯ ಮಂತ್ರಿಗಳು).—

ಅ) ಹೌದು.

ಆ) ಇಲ್ಲ.

ಇ) ಸಾರ್ವಜನಿಕ ಪ್ರಯಾಣಿಕರ ಪ್ರತಿಕ್ರಿಯೆಯನ್ನು ಪರಿಗಣಿಸಿ, ದಿನಾಂಕ ೮-೫-೯೦ ಮತ್ತು ೩-೬-೯೦ ರಿಂದ ನಗರ ಸಾರಿಗೆ ಮತ್ತು ಉಪನಗರ ಸಾರಿಗೆ ಸೇವೆಗಳ ಪ್ರಯಾಣ ದರವನ್ನು ಮತ್ತು ದಿನಾಂಕ ೫-೬-೯೦ ರಿಂದ ಗ್ರಾಮಾಂತರ ಸಾರಿಗೆ ಸೇವೆಗಳ ಪ್ರಯಾಣ ದರವನ್ನು ಇಳಿಸಲಾಗಿದೆ.

ಈ) ಸಾರಿಗೆ ಸಂಸ್ಥೆಯ ಆಡಳಿತ ವೆಚ್ಚ ಮಂಜೂರಾತಿಯ ಪರಿಮಿತಿಯೊಳಗಿದೆ.

ಉ) ಉದ್ಭವಿಸುವುದಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ.—ಈ ಬಗ್ಗೆ ನಿನ್ನೆಯೇ ಸಾಕಷ್ಟು ಚರ್ಚೆಯಾಗಿರುವುದರಿಂದ ಈಗ ಒಂದೇ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ನೀವು ಸಾರಿಗೆ ದರಗಳನ್ನು ಏರಿಸುವಾಗ ಏಕಾಯೇಕಿ ಅನೌನ್ಸ್ ಮಾಡುವ ಪ್ರವೃತ್ತಿ ಏನಿದೆ ಇದರಿಂದ ಸಾಮಾನ್ಯ ಪ್ರಯಾಣಿಕರಿಗೆ ತೊಂದರೆಯಾಗುತ್ತಾ ಇದೆ. ಅದಕ್ಕಾಗಿ ೩೦ ದಿವಸ ಮುಂಚಿತವಾಗಿ ಪ್ರಕಟಣೆ ಮಾಡಿದರೆ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ. ಉದಾಹರಣೆಗೆ, ಬೆಳಗಾವಿಯಿಂದ ಯಾರೋ ಒಬ್ಬರು ೧೦೦ ರೂಪಾಯಿ ಬಸ್ ಚಾರ್ಜ್ ಕೊಟ್ಟು ಬರುವಾಗ ಈ ಕಡೆಯಿಂದ ಹೋಗಲೂ ಇಷ್ಟೇ ಹಣ ಇಟ್ಟುಕೊಂಡಿದ್ದರೆ ಅವರಿಗೆ ವಾಪಸ್ ಹೋಗಲಾರದಂತಹ ಸ್ಥಿತಿ ಬರುತ್ತದೆ. ಈ ರೀತಿ ಏಕಾಏಕಿ ದರ ಏರಿಸುವುದನ್ನು ವೈಜ್ಞಾನಿಕ ಎಂದು ಹೇಳುತ್ತೀರಾ ? ಹೀಗೆ ಮಾಡತಕ್ಕಂಥ ಪ್ರವೃತ್ತಿ ಸರಿಯಲ್ಲ ಎನ್ನುವುದನ್ನು ಒಪ್ಪಿಕೊಳ್ಳುತ್ತೀರಾ ?

ಶ್ರೀ ಕೆ. ಜೆ. ಜಾರ್ಜ್.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂಥ ವಿಷಯ ಸರ್ಕಾರದ ಗಮನಕ್ಕೆ ಬಂದಿದೆ. ಬಹುಶಃ ಅವರು ಹೇಳಿದ ಹಾಗೆ, ಮೂವತ್ತು ದಿವಸ ಟೈಮ್ ಕೊಡಲಿಕ್ಕೆ ಆಗದಿದ್ದರೂ ಮೊನ್ನೆ ಮಾಡಿದ ಹಾಗೆ ಬಸ್ ದರವನ್ನು ದಿಢೀರನೆ ಏರಿಕೆ ಮಾಡುವುದಿಲ್ಲ. ಜನರಿಗೆ ಒಂದು ದಿವಸ ಅಥವಾ ಎರಡು ದಿವಸ ಮುಂಚಿತವಾದರೂ ಬಸ್ ದರವನ್ನು ಜಾಸ್ತಿ ಮಾಡುತ್ತೇವೆಂದು ತಿಳಿಸುತ್ತೇವೆ.